4.40 ಪಿ.ಎಂ

ಜೊತೆಗೆ ವೀರರಾಣಿ ಅಬ್ಬಕ್ಕದೇವಿಯ ಧೀರೋದಾತ್ತ ಜೀವನಸಾಧನೆಯನ್ನು ನಮ್ಮ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಇಲಾಖೆಯ ಪಠ್ಯಪುಸ್ತಕಗಳಲ್ಲಿ ಅದನ್ನು ಸೇರಿಸಿ ಆ ಸ್ವಾತಂತ್ರ್ಯ ಕಹಳೆಯೂದಿದ ರಾಣಿಯ ನೆನಪನ್ನು ನಮ್ಮ ಮುಂದಿನ ಪೀಳಿಗೆಯ ಜನರಿಗೆ ಮಾಡಿಕೊಡಬೇಕೆಂದು ನಾನು ರಾಜ್ಯ ಸರ್ಕಾರಕ್ಕೆ ವಿನಂತಿಮಾಡುತ್ತಿದ್ದೇನೆ. ಇದರ ಜೊತೆಗೆ ಕರ್ನಾಟಕ ಸರ್ಕಾರ ಕದಂಬೋತ್ಸವ, ಹಂಪಿ ಉತ್ಸವ, ಕಿತ್ತೂರು ರಾಣಿ ಚೆನ್ನಮ್ಮ ಉತ್ಸವ ಮೊದಲಾದ ಉತ್ಸವಗಳನ್ನು ಮಾಡುತ್ತಿರುವ ಸಂದರ್ಭದಲ್ಲಿ ಉಲ್ಲಾಳ ವೀರರಾಣಿ ಅಬ್ಬಕ್ಕದೇವಿಯ ಉತ್ಸವವನ್ನೂ ಕೂಡ ನಾಡಹಬ್ಬವಾಗಿ ಆಚರಿಸಬೇಕು. ಜೊತೆಗೆ ವೀರರಾಣಿ ಅಬ್ಬಕ್ಕದೇವಿಯ ಆರಾಧ್ಯದೈವ ಸೋಮನಾಥ ದೇವಾಲಯದ ಪರಿಸರದಲ್ಲಿ ಅಬ್ಬಕ್ಕ ದೇವಿಯ ಸ್ಮರಣಾರ್ಥ ಒಂದು ಸ್ಮಾರಕವನ್ನು ನಿರ್ಮಿಸಿಕೊಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಪ್ರಕಾಶ್‌ರವರೇ, ತಾವು ಉತ್ತರ ಹೇಳಿಬಿಡಿ, ಸರಿಹೋಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಬಹಳ ಸೂಕ್ತವಾಗಿರತಕ್ಕಂಥ ಒಳ್ಳೆಯ ಒಂದು ಸಲಹೆಯನ್ನು ತಾವು ಕೊಟ್ಟಿದ್ದೀರಿ. ವೀರರಾಣಿ ಅಬ್ಬಕ್ಕಳಿಗೆ ಸಂಬಂಧಪಟ್ಟಂತೆ ಉತ್ಸವವನ್ನು ಆಚರಣೆ ಮಾಡತಕ್ಕಂಥಾದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಕನ್ನಡ ಸಂಸ್ಕೃತಿ ಇಲಾಖೆಗೆ ಈ ದಿವಸವೇ ತಮ್ಮ ಪರವಾಗಿ ವಿನಂತಿಮಾಡಿಕೊಳ್ಳುತ್ತೇನೆ.

ಮಂಗಳೂರಿನ ಬೈಕಂಪಾಡಿಯಲ್ಲಿ ಕೆನರಾ ಸ್ಟೀಲ್ ಲಿಮಿಟೆಡ್ ಸಂಸ್ಥೆ ಮುಚ್ಚಿರುವುದು.

ಶ್ರೀ ಕುಂಬೆ ಸುಂದರರಾವ್ (ಸುರತ್ಕಲ್) : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಬೈಕಂಪಾಡಿಯಲ್ಲಿ ಕೆನರಾ ಸ್ಟೀಲ್ ಲಿಮಿಟೆಡ್ ಎಂಬ ಸಂಸ್ಥೆ 1974ರಲ್ಲಿ ಆರಂಭವಾಯಿತು. 24 ವರ್ಷಗಳಿಂದ ಈ ಸಂಸ್ಥೆ ಚೆನ್ನಾಗಿ ನಡೆದಿದೆ. ಅಲ್ಲಿಯ ಕಾರ್ಮಿಕರು ಒಂದೇ ಒಂದು ಸತ್ಯಾಗ್ರಹವನ್ನೂ ಮಾಡದೆ ಈ ಸಂಸ್ಥೆಯ ಏಳಿಗೆಗಾಗಿ ದುಡಿದಿದ್ದಾರೆ. ಇದೇ ಎಂಟು ತಿಂಗಳ ಕೆಳಗೆ ಈ ಸಂಸ್ಥೆ ಇದ್ದಕ್ಕಿದ್ದಹಾಗೆ ಲಾಕೌಟನ್ನು ಘೋಷಣೆ ಮಾಡಿತು. ಅದು ಯಾವ ರೀತಿ ಎಂದರೆ ಕರೆಂಟ್ ಬಿಲ್ ಕಟ್ಟದೆ ಡಿಪಾರ್ಟ್‌ಮೆಂಟ್‌ನವರು ಫ್ಯೂಸನ್ನು ಕಿತ್ತುಕೊಂಡು ಹೋದರು ಎಂಬ ನೆಪವನ್ನು ಮಾಡಿ ಈ ಕಾರ್ಮಿಕರನ್ನು ಬೀದಿಪಾಲು ಮಾಡಿದ್ದಾರೆ.135ಮಂದಿ ಕಾರ್ಮಿಕರು ಇವತ್ತು ಬೀದಿಪಾಲಾಗಿದ್ದಾರೆ. ದಿನ ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಆಶಾದಾಯಕವಾದ ಒಂದು ಅವಕಾಶ ಸಿಕ್ಕೀತು, ಭದ್ರತೆ ಒದಗೀತು ಎಂದು ಅವರು ಆಸೆ ಮಾಡುತ್ತಿದ್ದಾರೆ. ಈ ಸಂಸ್ಥೆ ಏನಿದೆ ಇದು ಶ್ರೀಮಂತ ಸಂಸ್ಥೆಯಾಗಿದೆ. ಇದು ಬೇರೆಬೇರೆ ಉಪಸಂಸ್ಥೆಗಳನ್ನು ಬೆಳಸಿಕೊಂಡಿದೆ. ಎಲ್ಲದಕ್ಕೂ ಈ ಕೆನರಾ ಸ್ಟೀಲ್ ಲಿಮಿಟೆಡ್ ಸಂಸ್ಥೆಯ ಆದಾಯವೇ ಕಾರಣವಾಗಿದೆ. ಇಷ್ಟು ಮಾತ್ರವಲ್ಲ, ಈ ಸಂಸ್ಥೆ ಚೆನ್ನಾಗಿ ನಡೆಯುವಾಗ 12 ಕೋಟಿ ಶೇರುಬಂಡವಾಳವನ್ನು ಕಲೆಕ್ಟ್ ಮಾಡಿದೆ. ಇಂತಹ ಒಂದು ಸಂಸ್ಥೆಯ ಕಾರ್ಮಿಕರನ್ನು ಅನ್ಯಾಯದಲ್ಲಿ ಬೀದಿಪಾಲು ಮಾಡಿದ್ದನ್ನು ಯಾರೂ ಕೇಳಲಿಲ್ಲ ಎಂದರೆ ಇದರ ಅರ್ಥ ಏನು ಎಂಬುದು

ನನಗೆ ತಿಳಿಯುತ್ತಿಲ್ಲ. ಸರ್ಕಾರದವರು ಅವರ ರಕ್ಷಣೆಗೆ ಬರಬೇಕು. ಅಲ್ಲಿ ಹೋದರೆ ಮಾರ್ಗದ ಬದಿಯಲ್ಲಿ ಗಂಜಿ ಬೇಯಿಸಿಕೊಂಡು ಈ ಕಾರ್ಮಿಕರು ಒಳ್ಳೆಯ ಕಾಲ ಬಂದೀತು, ಒಳ್ಳೆಯ ಜನರು ಬಂದರು, ನಮಗೆ ರಕ್ಷಣೆ ಕೊಟ್ಟಾರು ಎಂದು ನೋಡುತ್ತಿರುವುದನ್ನು ನೋಡಿದರೆ ಕರುಳು ಕಿತ್ತುಬರುವಹಾಗೆ ಇದೆ. ಯಾರೂ ಇವರ ರಕ್ಷಣೆಗೆ ಹೋಗಿಲ್ಲ. ಸರ್ಕಾರ ಕಾರ್ಮಿಕ ಇಲಾಖೆಯ ಕಡೆಯಿಂದ ಏನಾದರೂ ಒಂದು ವ್ಯವಸ್ಥೆಯಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೆನರಾ ಸ್ಟೀಲ್ ಲಿಮಿಟೆಡ್ ಸಂಸ್ಥೆಯ ಕಾರ್ಮಿಕರ ಬಗ್ಗೆ ತಿಳಿಸಿದ್ದಾರೆ. ಆ ಸಂಸ್ಥೆಯನ್ನು ಕಾಂಪನ್‌ಸೇಶನ್ ಕೊಡದೆ ಕಾರ್ಖಾನೆಯನ್ನು ಮುಚ್ಚುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಬಹುಶಃ ಕಾನೂನು ಬಾಹಿರವಾಗಿ ಬೀಗಮುದ್ರೆ ಏನಾದರೂ ಮಾಡಿದ್ದಾರೆಯೇ ಎನ್ನುವದರ ಬಗ್ಗೆ ವರದಿಯನ್ನು ತರಿಸಿಕೊಂಡು ಸೂಕ್ತ ಕನ್‌ಸೀಲಿಯೇಷನ್ ಮುಖಾಂತರ ಆ ವ್ಯಾಜ್ಯವನ್ನು ಬಗೆಹರಿಸಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ಮೂಲಕ ಅವರಿಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

1993ರಲ್ಲಿ ಭಟ್ಕಳದಲ್ಲಿ ನಡೆದ ಕೋಮುಗಲಭೆಗೆ ಸಂಬಂಧಪಟ್ಟಂತೆ ಕೆ. ಜಗನ್ನಾಥ್ ಶೆಟ್ಟಿ ಆಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರೂ ಸದನದಲ್ಲಿ ಮಂಡಿಸದೆ ಇರುವುದು

ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಸನ್ಮಾನ್ಯ ಅಧ್ಯಕ್ಷರೇ, ಅತೀ ದುಃಖದಿಂದ ಈ ವಿಷಯವನ್ನು ಮೂರನೇ ಬಾರಿಗೆ ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. 1993ರಲ್ಲಿ ಭಟ್ಕಳದಲ್ಲಿ ನಡೆದಂಥ ಕೋಮು ಗಲಭೆಗೆ ಸಂಬಂಧಪಟ್ಟಂತೆ ಒಂದು ಆಯೋಗವನ್ನು ರಚನೆ ಮಾಡಲಾಯಿತು. ಕೆ. ಜಗನ್ನಾಥಶೆಟ್ಟಿ ಆಯೋಗವು ಈಗಾಗಲೇ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿ ಒಂದೂವರೆ ವರ್ಷವಾಯಿತು. ಒಂದೂವರೆ ವರ್ಷವಾದರೂ ಕೂಡ ವರದಿಯನ್ನು ಇನ್ನೂ ತನಕ ಸದನದಲ್ಲಿ ಮಂಡಿಸಿಲ್ಲ. ಭಟ್ಕಳದಲ್ಲಿ 17 ಜನರ ಕಗ್ಗೊಲೆಯಾಯಿತು, ಎಷ್ಟೋ ಮನೆಗಳ ಲೂಟಿಯಾಯಿತು, ಎಷ್ಟೋ ಅಕ್ಕತಂಗಿಯರ ಅತ್ಯಾಚಾರವಾಯಿತು. ಈ ರೀತಿಯ ಘಟನೆಯನ್ನು ಯಾರು ಮಾಡಿದ್ದಾರೆ, ಅದರ ಹಿನ್ನೆಲೆ ಏನು ಎಂಬುದರ ಕಾರಣವನ್ನು ಇವತ್ತು ಜನ ತಿಳಿದುಕೊಳ್ಳಬೇಕಾಗಿದೆ, ಈ ರಾಜ್ಯದ ಎಲ್ಲಾ ಜನರೂ ತಿಳಿದುಕೊಳ್ಳಬೇಕಾಗಿದೆ, ಸರ್ಕಾರ ಕೂಡ ತಿಳಿದುಕೊಳ್ಳಬೇಕಾಗಿದೆ. ಆದರೆ ಜನರು ಆಡಿಕೊಳ್ಳುತ್ತಿದ್ದಾರೆ ಆಯೋಗದ ವರದಿಯನ್ನು ಇನ್ನೂತನಕ ಸದನದಲ್ಲಿ ಏಕೆ ಮಂಡಿಸಿಲ್ಲ ಅಥವಾ ಸರ್ಕಾರವೇ ಅವರಿಗೆ ರಕ್ಷಣೆ ಕೊಡುತ್ತಿದೆಯೇ, ಅದಕ್ಕೆ ಇದನ್ನು ಮುಚ್ಚಿಡುತ್ತಿದ್ದಾರೆ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಇವತ್ತು ಸರ್ಕಾರವನ್ನು ಉತ್ತರ ಕೇಳಿದಾಗ 'ಪರಿಶೀಲನೆಯಲ್ಲಿದೆ, ಪರಿಶೀಲನೆಯಲ್ಲಿದೆ' ಎಂದು ಆ ರೀತಿಯಾದ ಉತ್ತರವನ್ನು ಕೊಡುತ್ತಿದ್ದೀರಿ. ಏಕೆ ಈ ವರದಿಯನ್ನು ಮುಚ್ಚಿಡುತ್ತಿದ್ದೀರಿ? ಲಕ್ಷಗಟ್ಟಲೆ ಹಣ ಖರ್ಚುಮಾಡಿ ಆಯೋಗವನ್ನು ರಚನೆಮಾಡಿ, ಅವರು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಒಂದೂವರೆ ವರ್ಷವಾದರೂ ಈ ತನಕ ಅದನ್ನು ಸದನದಲ್ಲಿ ಮಂಡಿಸುತ್ತಿಲ್ಲ. ಇದರಿಂದ ಸರ್ಕಾರಕ್ಕೆ ಆಗುವಂಥ ತೊಂದರೆ ಏನು ಎಂದು ಸ್ಪಷ್ಟವಾದ ಉತ್ತರವನ್ನು ಸರ್ಕಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.